# Faculty of Business Studies (Exclusively for Women)

## Women Empowerment Cell

Celebrates

## International Womens Week - 21st Feb to 2nd March 2023

| | |
|---|---|
| **Title of the Event** | **Management Museum** |
| **Date of Activity held** | **21 Feb 2023** |
| **Time of Activity** | **11:00 am - 5:00 pm** |
| **Type of Activity (Cultural/ Cocurriclar/Curricular)** | **Cocurricular** |
| **Resource Person / Guest** | **(i)Mathoshree Dr. Dakshayini S.Appa, (ii) Poojya Chi. Doddappa Appa, (iii) Dr.Vilasvathi Khuba, (iv) Sri, Basavaraj S. Deshmukh (V)Dr.Niranjan V.Nisty, (vi) Dr.V.D.Mytri (vii)Dr.Anilkumar Bidve (viii) Dr.Laxmi Patil Maka (ix) Dr.S.H.Honnalli (x) Chairpersons, Faculties & Students** |
| **Professional details of Resource Person / Guest** | **(i) Chairperson Sharnabasveshwar Vidyavaardhak Sangha, Member, Board of Governor, Sharnbasva University, Trustee, Poojya Dr.Sharnbasawappa Appa Family trust, Sharnbasveshwar Samsthan**<br>**(ii) 9th Mahadasoha Peethadhipati, Sharanbasveshwar Samsthana, Trustee, Poojya Dr.Sharnbasawappa Appa Family trust, Sharnbasveshwar Samsthan (iii) President Kalaburagi Basava Samiti (iv) Secretary, Sharnabasveshwar Vidyavaardhak Sangha, Member, Board of Governor, Sharnbasva University**<br>**(v) Vice-Chancellor, Sharnbasva University (vi) Pro-Vice Chancellor**<br>**(vii) Registrar, Sharnbasva University (viii) Dean, Sharnbasva University**<br>**(ix) Dean, Faculty of Business Studies** |
| **Number of Students attended** | **More than 1000 Students** |
| **Number of Staff attended** | **More than 80 Staff** |
| **Activity Organizing Department** | **Faculty of Business Studies – MBA Department** |
| **Organiser** | **Dr. Shobha Hangarki** |
| **Description of Activity (Min 500 words)** | **The Management Museum highlights the history of the companies, depicts the ups & downs & the success story of business empire. It also tries to depict the strategies, new innovations adopted by the companies. It also highlighted on successful women entrepreneurs who have created a niche for themselves and have started innovative businesses. This museum highlights on latest innovations in business that has made the life easier.** |
| **Outcome of the Activity** | **This Management Museum was to bridge between the two worlds the past and the future. It strives to provide unique learning experiences based on stories, lives from Indian Business & Management traditions of ingenuity, resourcefulness and innovation. The purpose is to inspire students and people visiting to learn from those business &** |

| | |
|---|---|
| | **innovations from time to time to meet the need of customers, that will help to shape a better future, as well inspire them to become Entrepreneurs in the near future.** |

**Activity Photograghs (Geotagged only)**


















**Staff Incharge**

**Dr.Shobha Hangarki**

# ವಸ್ತು ಸಂಗ್ರಹಾಲಯ ಉದ್ಘಾಟನೆ




ಕಲಬುರಗಿ: ಶರಣಬಸವ ವಿಶ್ವವಿದ್ಯಾಲಯದಲ್ಲಿ ಬಿಬಿಎಂ ಹಾಗೂ ಎಂಬಿಎ ಪದವಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿನಿಯರಿಗಾಗಿ ವಿಶ್ವವಿದ್ಯಾಲಯವು 'ನವೀನ ಮತ್ತು ಸಂವಾದಾತ್ಮಕ ನಿರ್ವಹಣಾ ವಸ್ತು ಸಂಗ್ರಹಾಲಯ'ವನ್ನು ಆರಂಭಿಸಿದೆ.

ವಸ್ತು ಸಂಗ್ರಹಾಲಯವನ್ನು ಬುಧವಾರ ಉದ್ಘಾಟಿಸಿ ಮಾತನಾಡಿದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರಪರ್ಸನ್ ಡಾ. ದಾಕ್ಷಾಯಿಣಿ ಅಪ್ಪ ಅವರು, 'ಇಂತಹ ವಸ್ತುಸಂಗ್ರಹಾಲಯದಿಂದ ವಿದ್ಯಾರ್ಥಿಗಳ ಜ್ಞಾನಾರ್ಜನೆ ಹೆಚ್ಚುತ್ತದೆ. ಅಲ್ಲದೇ ಗೊದ್ರೇಜ್, ಟಾಟಾ, ರಿಲಯನ್ಸ್‌ನಂತಹ ಪ್ರಮುಖ ಕಂಪನಿಗಳು ವ್ಯಾಪಾರದ ಜಗತ್ತಿನಲ್ಲಿ ಹೇಗೆ ತಮ್ಮದೇ ಆದ ಛಾಪು ಮೂಡಿಸಿವೆ ಎಂಬುದನ್ನೂ ತಿಳಿದುಕೊಳ್ಳಲು ಅನುಕೂಲವಾಗುತ್ತದೆ' ಎಂದು ಹೇಳಿದರು.

ಎಂಬಿಎ ವಿಭಾಗದ ಮುಖ್ಯಸ್ಥೆ ಪ್ರೊ. ಶೈಲಜಾ ಮಠಪತಿ,ಡಾ. ಶೋಭಾ ಹಂಗರಕಿ ಅವರು, 'ಈ ಮ್ಯೂಸಿಯಂ ವ್ಯಾಪಾರ ಸಂಸ್ಥೆಗಳ ಯಶಸ್ಸಿನ ಕಥೆಗಳನ್ನು ಎತ್ತಿ ತೋರಿಸುತ್ತದೆ' ಎಂದರು.

ಡಾ. ಲಕ್ಷ್ಮಿ ಪಾಟೀಲ್ ಮಾಕಾ ಅವರು, 'ಉದ್ಯಮ ಕ್ಷೇತ್ರದಲ್ಲಿ ಯಶಸ್ವಿಯಾದ ಮಹಿಳಾ ಉದ್ಯಮಿಗಳಾದ ಕಿರಣ್ ಮಜುಂದಾರ್, ಫಲ್ಗುಣಿ ನಾಯರ್, ವಂದನಾ ಮಿತ್ರ, ಸುಚಿ ಮುಖರ್ಜಿ ಅವರು ತಮ್ಮ ಯಶಸ್ಸಿನ ಹಾದಿಯಲ್ಲಿ ಅಳವಡಿಸಿಕೊಂಡ ತಂತ್ರಗಳು ಸಹ ಇಲ್ಲಿನ ವಸ್ತು ಸಂಗ್ರಹಾಲಯದಲ್ಲಿ ಅನಾವರಣಗೊಳಿಸಲಾಗಿದೆ' ಎಂದು ಹೇಳಿದರು.

## ಶರಣಬಸವ ವಿವಿಯಲ್ಲಿ ನವೀನ ನಿರ್ವಹಣಾ ವಸ್ತುಸಂಗ್ರಹಾಲಯ

# ಯಶಸ್ಸಿನ ಸೂತ್ರ ಅಳವಡಿಕೆಗೆ ಸ್ಫೂರ್ತಿ



ಶರಣಬಸವ ವಿಶ್ವವಿದ್ಯಾಲಯದ ವ್ಯವಹಾರ ಅಧ್ಯಯನ ನಿಕಾಯದಲ್ಲಿ ವಸ್ತುಸಂಗ್ರಹಾಲಯಕ್ಕೆ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವ ಚಾಲನೆ ನೀಡಿದರು. ಡಾ. ಲಕ್ಷ್ಮಿ ಪಾಟೀಲ್, ಪ್ರೊ. ಶೈಲಜಾ ಮಠಪತಿ ಇತರರಿದ್ದರು.

**ವಿಕ ಸುದ್ದಿಲೋಕ** ಕಲಬುರಗಿ

ಶರಣಬಸವ ವಿಶ್ವವಿದ್ಯಾಲಯದ ವ್ಯವಹಾರ ಅಧ್ಯಯನ ನಿಕಾಯ (ಮಹಿಳೆಯರಿಗಾಗಿ ಪ್ರತ್ಯೇಕ) ದಲ್ಲಿ ಬಿಬಿಎಂ ಮತ್ತು ಎಂಬಿಎ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸಲು ನವೀನ ಮತ್ತು ಸಂವಾದಾತ್ಮಕ ನಿರ್ವಹಣಾ ವಸ್ತುಸಂಗ್ರಹಾಲಯವನ್ನು ಹೊರತಂದಿದೆ.

ವಸ್ತುಸಂಗ್ರಹಾಲಯವನ್ನು ಬುಧವಾರ ಔಪಚಾರಿಕವಾಗಿ ಉದ್ಘಾಟಿಸಿದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರಪರ್ಸನ್ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವ ಮಾತನಾಡಿ, ಈ ವಸ್ತುಸಂಗ್ರಹಾಲಯದ ಸ್ಥಾಪನೆಗೆ ಶ್ರಮಪಟ್ಟ ವಿಶ್ವವಿದ್ಯಾಲಯದ ಡೀನ್ ಡಾ. ಲಕ್ಷ್ಮಿ ಪಾಟೀಲ್ ಮಾಕಾ ಹಾಗೂ ವ್ಯವಹಾರ ಅಧ್ಯಯನ ನಿಕಾಯದ ಸಿಬ್ಬಂದಿ ಕೈಗೊಂಡಿರುವ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ಮ್ಯಾನೇಜ್‌ಮೆಂಟ್ ಮ್ಯೂಸಿಯಂ, ವಿದ್ಯಾರ್ಥಿಗಳಿಗೆ ವ್ಯವಹಾರ ನಿರ್ವಹಣೆಯ ಜ್ಞಾನವನ್ನು ಸುಧಾರಿಸಲು ಮತ್ತು ಗೋದ್ರೇಜ್, ಟಾಟಾ, ರಿಲಯನ್ಸ್, ಪ್ಯಾರಿ ಮತ್ತು ಇತರ

ಪ್ರಮುಖ ಕಂಪನಿಗಳು ವ್ಯಾಪಾರದ ಜಗತ್ತಿನಲ್ಲಿ ತಮ್ಮದೇ ಆದ ಛಾಪು ಮೂಡಿಸಲು ಹೇಗೆ ಶ್ರಮಪಟ್ಟಿವೆ ಎನ್ನುವುದನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ ಎಂದರು.

ಡೀನ್ ಡಾ. ಲಕ್ಷ್ಮಿ ಪಾಟೀಲ್ ಮಾಕಾ ಮಾತನಾಡಿ, ಯುವ ಮ್ಯಾನೇಜ್‌ಮೆಂಟ್ ಪದವೀಧರರಿಗೆ ವ್ಯಾಪಾರ ಜಗತ್ತು, ಮಹಿಳಾ ಉದ್ಯಮಿಗಳ ಸಾಮರ್ಥ್ಯ ಮತ್ತು ಯಶಸ್ಸನ್ನು ಅರ್ಥಮಾಡಿಕೊಳ್ಳಲು ಮತ್ತು ಭವಿಷ್ಯದಲ್ಲಿ ಅವರ ವ್ಯಾಪಾರ ಸಾಹಸಗಳಲ್ಲಿ ಅವರ ಕೆಲವು ಯಶಸ್ಸಿನ ಸೂತ್ರವನ್ನು ಅಳವಡಿಸಿಕೊಳ್ಳಲು ವಸ್ತುಸಂಗ್ರಹಾಲಯವು ಸ್ಫೂರ್ತಿಯ ಮೂಲವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎಂಬಿಎ ವಿಭಾಗದ ಮುಖ್ಯಸ್ಥೆ ಪ್ರೊ. ಶೈಲಜಾ ಮಠಪತಿ ಮತ್ತು ಮ್ಯೂಸಿಯಂ ಸ್ಥಾಪನೆಗೆ ಶ್ರಮಪಟ್ಟ ಡಾ. ಶೋಭಾ ಹಂಗರಕಿ ಮಾತನಾಡಿ, ಮ್ಯೂಸಿಯಂ ಮುಖ್ಯವಾಗಿ ಯಶಸ್ವಿ ವ್ಯಾಪಾರ ಸಂಸ್ಥೆಗಳ ಯಶಸ್ಸಿನ ಕಥೆಗಳನ್ನು ಎತ್ತಿ ತೋರಿಸುತ್ತದೆ ಎಂದರು.

# ನವೀನ ನಿರ್ವಹಣಾ ವಸ್ತುಸಂಗ್ರಹಾಲಯ



ಕಲಬುರಗಿ: ಫೆ.23: ಶರಣಬಸವ ವಿಶ್ವವಿದ್ಯಾಲಯದ ವ್ಯವಹಾರ ಅಧ್ಯಯನ ನಿಕಾಯ (ಮಹಿಳೆಯರಿಗಾಗಿ ಪ್ರತ್ಯೇಕವಾಗಿ) ದಲ್ಲಿ, ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ (೫೫ಒ) ಮತ್ತು ಮಾಸ್ಟರ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ (ಒ೫೦) ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸಲು ನವೀನ ಮತ್ತು ಸಂವಾದಾತ್ಮಕ ನಿರ್ವಹಣಾ ವಸ್ತುಸಂಗ್ರಹಾಲಯವನ್ನು ಹೊರತಂದಿದೆ.

ವಸ್ತುಸಂಗ್ರಹಾಲಯವನ್ನು ಬುಧವಾರ ಔಪಚಾರಿಕವಾಗಿ ಉದ್ಘಾಟಿಸಿದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರಪರ್ಸನ್ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ ಮಾತನಾಡಿ, ಈ ವಸ್ತುಸಂಗ್ರಹಾಲಯದ ಸ್ಥಾಪನೆಗೆ ಶ್ರಮಪಟ್ಟ ವಿಶ್ವವಿದ್ಯಾಲಯದ ಡೀನ್ ಡಾ. ಲಕ್ಷ್ಮೀ ಪಾಟೀಲ್ ಮಾಕಾ ಹಾಗೂ ವ್ಯವಹಾರ ಅಧ್ಯಯನ ನಿಕಾಯದ ಸಿಬ್ಬಂದಿ ಕೈಗೊಂಡಿರುವ ಕಾರ್ಯವೈಖರಿಯನ್ನು ಶ್ಲಾಘಿಸಿದರು. ಮ್ಯಾನೇಜ್‌ಮೆಂಟ್ ಮ್ಯೂಸಿಯಂ, ವಿದ್ಯಾರ್ಥಿಗಳಿಗೆ ವ್ಯವಹಾರ ನಿರ್ವಹಣೆಯ ಜ್ಞಾನವನ್ನು ಸುಧಾರಿಸಲು ಮತ್ತು ಗೋದ್ರೇಜ್, ಟಾಟಾ, ರಿಲಯನ್ಸ್, ಪ್ಯಾರಿ ಮತ್ತು ಇತರ ಪ್ರಮುಖ ಕಂಪನಿಗಳು ವ್ಯಾಪಾರದ ಜಗತ್ತಿನಲ್ಲಿ ತಮ್ಮದೇ ಆದ ಛಾಪು ಮೂಡಿಸಲು ಹೇಗೆ ಶ್ರಮಪಟ್ಟಿವೆ ಎನ್ನುವುದನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ ಎಂದರು.

ಎಂಬಿಎ ವಿಭಾಗದ ಮುಖ್ಯಸ್ಥೆ ಪ್ರೊ. ಶೈಲಜಾ ಮಠಪತಿ ಮತ್ತು ಮ್ಯೂಸಿಯಂ ಸ್ಥಾಪನೆಗೆ ಶ್ರಮಪಟ್ಟ ಡಾ. ಶೋಭಾ ಹಂಗರಕಿ ಮಾತನಾಡಿ, ಮ್ಯೂಸಿಯಂ ಮುಖ್ಯವಾಗಿ ಯಶಸ್ವಿ ವ್ಯಾಪಾರ ಸಂಸ್ಥೆಗಳ ಯಶಸ್ಸಿನ ಕಥೆಗಳನ್ನು ಎತ್ತಿ ತೋರಿಸುತ್ತದೆ. ವಿಶೇಷವಾಗಿ 17 ನೇ ಶತಮಾನದಲ್ಲಿ ಅಥವಾ ಅದಕ್ಕೂ ಮೊದಲು ಸ್ಥಾಪಿಸಲ್ಪಟ್ಟ ವ್ಯಾಪಾರ ಕಂಪನಿಗಳು ಇಷ್ಟು ವರ್ಷ ಉಳಿದುಕೊಂಡು, ಭಾರತದಲ್ಲಿ ವ್ಯಾಪಾರದ ನಾಯಕರಾಗಿ ಬೆಳೆದಿದ್ದು ಮಾತ್ರವಲ್ಲದೆ ವಿಶ್ವದಲ್ಲಿಯೂ ಛಾಪು ಮೂಡಿಸಿದ್ದಾರೆ.

17 ನೇ ಶತಮಾನದಲ್ಲಿ ಸ್ಥಾಪನೆಯಾದ ಈ ಕಂಪನಿಗಳು ಪ್ರತಿ ವರ್ಷಗಳಲ್ಲಿ ಹೊಸ ತಂತ್ರಗಳು, ಹೊಸ ಪ್ರವೃತ್ತಿಗಳನ್ನು ಹೇಗೆ ಅಳವಡಿಸಿಕೊಂಡಿವೆ ಮತ್ತು ಸಮಾಜದ ಅಗತ್ಯಗಳಿಗೆ ಅನುಗುಣವಾಗಿ ತಮ್ಮನ್ನು ತಾವು ಹೇಗೆ ರೂಪಿಸಿಕೊಂಡಿವೆ ಎಂಬುದನ್ನು ಈ ಮ್ಯೂಸಿಯಂ ಎತ್ತಿ ತೋರಿಸುತ್ತದೆ. ಉಪಗ್ರಹ, ಆಟೋಮೊಬೈಲ್ ಉದ್ಯಮ, ಆಹಾರ ಉತ್ಪನ್ನಗಳು, ಕಂಜ್ಯೂಮರ್ಸ್ ಡ್ಯೂರೆಬಲ್ಸ್, ಏರ್‌ಲೈನ್ಸ್, ಆಟೋಮೇಷನ್, ಆನ್‌ಲೈನ್ ವ್ಯಾಪಾರ, ಔಷಧೀಯ ಉದ್ಯಮ ಮತ್ತು ಇತರ ಕ್ಷೇತ್ರಗಳಲ್ಲಿ ಆವಿಷ್ಕಾರಗಳನ್ನು ಮಾಡಿದ ಭಾರತೀಯ ಕಂಪನಿಗಳಿಗೆ ವಸ್ತುಸಂಗ್ರಹಾಲಯದಲ್ಲಿ ವಿಶೇಷ ಸ್ಥಾನವನ್ನು ನೀಡಲಾಗಿದೆ ಎಂದು ಡಾ. ಹಂಗರಕಿ ತಿಳಿಸಿದರು. ಯಶಸ್ವೀ ಮಹಿಳಾ ಉದ್ಯಮಿಗಳಾದ ಕಿರಣ್ ಮಜುಂದಾರ್, ಫಲ್ಗುಣಿ ನಾಯರ್, ವಂದನಾ ಮಿತ್ರ, ಸುಚಿ ಮುಖರ್ಜಿ ಮತ್ತು ಇತರರು ತಮ್ಮ ಯಶಸ್ಸಿನ ಹಾದಿಯಲ್ಲಿ ಅಳವಡಿಸಿಕೊಂಡ ತಂತ್ರಗಳು ವಸ್ತುಸಂಗ್ರಹಾಲಯದಲ್ಲಿ ಉಲ್ಲೇಖವನ್ನು ಕಂಡುಕೊಳ್ಳುವ ಮೂಲಕ ವಸ್ತುಸಂಗ್ರಹಾಲಯದಲ್ಲಿ ಪ್ರಮುಖ ಸ್ಥಾನವನ್ನು ಕಂಡು-ಕೊಂಡಿದ್ದಾರೆ.

ಯುವ ಮ್ಯಾನೇಜ್‌ಮೆಂಟ್ ಪದವೀಧರರಿಗೆ ವ್ಯಾಪಾರ ಜಗತ್ತು, ಮಹಿಳಾ ಉದ್ಯಮಿಗಳ ಸಾಮರ್ಥ್ಯ ಮತ್ತು ಯಶಸ್ಸನ್ನು ಅರ್ಥಮಾಡಿಕೊಳ್ಳಲು ಮತ್ತು ಭವಿಷ್ಯದಲ್ಲಿ ಅವರ ವ್ಯಾಪಾರ ಸಾಹಸಗಳಲ್ಲಿ ಅವರ ಕೆಲವು ಯಶಸ್ಸಿನ ಸೂತ್ರವನ್ನು ಅಳವಡಿಸಿಕೊಳ್ಳಲು ವಸ್ತುಸಂಗ್ರಹಾಲಯವು ಸ್ಫೂರ್ತಿಯ ಮೂಲವಾಗಿದೆ ಎಂದು ಡಾ ಲಕ್ಷ್ಮೀ ಪಾಟೀಲ್ ಮಾಕಾ ಹೇಳಿದರು.